ಸಿ ಡಬ್ಲೂ 1 ಪಿ ಡಬ್ಲೂ 1

ದಿ: 28-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು: ಶ್ರೀ ಎಮ್ ಎಮ್ ವಕೀಲರಿಂದ:-**

1. ನಿ ಪಿ 5 ರಿಂದ 27 ಕಂದಾಯ ದಾಖಲಾತಿಗಳು ನ್ಯಾಯಾಲಯಕ್ಕೆ ಹಾಜರುಪಡಿಸುವ ಪೂರ್ವದಲ್ಲಿ ನನ್ನ ಬಳಿಯೇ ಇದ್ದವು. ದಾಖಲಾತಿಗಳನ್ನು ಯಾವಾಗ ತೆಗೆಸಿದ್ದೇನೆಂದು ತಾರೀಖು ನನಗೆ ಹೇಳಲು ಬರುವುದಿಲ್ಲ. ದೂರು ಕೊಡುವ ಕಾಲಕ್ಕೆ ಒಂದು ಪ್ರತಿ ದಾಖಲಾತಿಯನ್ನು ಪೋಲಿಸರಿಗೆ ಕೊಟ್ಟಿದ್ದೇನೆ. ನಿ ಪಿ 5 ರಿಂದ 27 ರ ಒಟ್ಟು 03 ಪ್ರತಿ ದಾಖಲಾತಿಗಳನ್ನು ಪಡೆದುಕೊಂಡು ಒಂದು ಪ್ರತಿಯನ್ನು ಫಿರ್ಯಾದಿಯ ಜೊತೆಗೆ ಪೋಲಿಸರಿಗೆ ಕೊಟ್ಟಿರುತ್ತೇನೆ. 2005 ರಲ್ಲಿ ದಾಖಲಾತಿಗಳನ್ನು ಪಡೆದಿದ್ದೇನೆ 8 ವರ್ಷದಿಂದೆ ಪೋಲಿಸರಿಗೆ ಕೊಟ್ಟಿರುತ್ತೇನೆ. ನಿ ಪಿ 17 ಪಹಣಿಯನ್ನು ದಿನಾಂಕ: 20-01-2018 ರಂದು ಪ್ರಿಂಟ್ ಔಟ್ ತೆಗೆಸಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ದಿನಾಂಕ: 20-01-2018 ರಂದು ಸದರಿ ನಿ ಪಿ 17 ದಾಖಲೆಯನ್ನು ಪ್ರಿಂಟ್ ಔಟ್ ತೆಗೆಸಿದ್ದು ಪಿ ಎಸ್ ಐ ದಿನಾಂಕ: 20-08-2017 ರಂದು ಪ್ರಿಂಟ್ ಔಟ್ ತೆಗೆಸಿದ 5 ತಿಂಗಳು ಮುಂಚೆ ಸ್ವೀಕಾರ ಮಾಡಿದ್ದು ಸರಿಯಾಗಿದೆಯಾ ತಪ್ಪಾಗಿದೆ ಎಂದರೆ ಸರಿಯಾಗಿದೆ ಎನ್ನುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.
ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ